

ಓಡುತ್ತಲೇ ಇತ್ತು, ತನ್ನಪಾಡಿಗೆ ತಾನು. ಸ್ವಲ್ಪ ಹೊತ್ತು ಬಿಟ್ಟು, ನಮ್ಮ 'ಪರಮಾಪ್ತ' ಮತ್ತೇ ಆ ಹುಡುಗಿಯರ ಕಡೆಗೆ ತಿರುಗಿ, ಮೇಲೆ ಬಿದ್ದು ಮಾತನಾಡಿಸುವವರ ತೆರದಲ್ಲಿ, ಪಕ್ಕದಲ್ಲಿದ್ದ ನನ್ನತ್ತ, 'ಇವರು ಯಾರು ಗೊತ್ತಾ? ಕನ್ನಡಾ ರೈಟ್ರು. ಏಳೆಂಟು ಪುಸ್ತಕ ಬರೆದಿದ್ದಾರೆ. ಪಠ್ಯ ಪುಸ್ತಕಗಳಲ್ಲಿ ಇವರ ಪಾಠಗಳಿವೆ. ಇವರೂ ಒಬ್ಬ ಸಾಹಿತಿ' ಅಂದಾಗ ಆ ಹುಡುಗಿಯರು ನನ್ನತ್ತ ತುಸು ಅನುಮಾನದಿಂದಲೇ ನಿಟ್ಟಿಸಿದ್ದವು.

ಪಠ್ಯಪುಸ್ತಕಗಳಲ್ಲಿ ಫೋಟೊ ಸಮೇತ ಕಾಣಿಸುವವರು ಹೀಗೆ ಜನರಲ್ ಬೋಗಿಯಲ್ಲಿ ಸಾಮಾನ್ಯರಲ್ಲಿ ಸಾಮಾನ್ಯರಾಗಿ ಪ್ರಯಾಣಿಸುತ್ತಾರೆಯೇ ಎಲ್ಲಿಯಾದರು? 'ಸುಮ್ಮನೆ ಇರ್ರೀ. ಆಗಲೇ 'ಕುಯೆಂಪು' ಅಂದ ಹಾಗೆ ನನಗೆ 'ಸಾಯಿತಿ' ಅಂದುಗಿಂದಾರು' ಎಂದಿದ್ದಕ್ಕೆ; 'ಮಕ್ಕಳಿಗೆ ತಿಳಿಸಿ ಹೇಳಬೇಕಾದದ್ದು ನಮ್ಮ ಧರ್ಮ ಕಣ್ರೀ, ಅದು ನಮ್ಮ ಜವಾಬ್ದಾರಿ ಕೂಡ' ಎಂದು ನನ್ನ ಬಾಯಿ ಕಟ್ಟಿದ್ದರು.

ತುಸು ಹೊತ್ತು ಗಂಭೀರವದನನಾಗಿ ಕೂತಿದ್ದ ನಾನು, ಬರಹಗಾರ ಎಂದು ಬೇರೆ ನನ್ನನ್ನು ಪರಿಚಯಿಸಿದ್ದಾರೆ. 'ಕಾಲಲ್ಲಿ ಹಾಕೊ ಚಪ್ಪಲ್‌ಗೆ ಎಷ್ಟೊಂದು ಹೆಸರು ಇವೆ, ಏನು ಕತೆ, ಗೊತ್ತೇನ್ರಮ್ಮಾ, ಕಾಲಿಂದ ಮೆಟ್ಟುವುದರಿಂದಾಗಿ ಅವನ್ನು 'ಮೆಟ್ಟು', ಸದಾ ಜೋಡಿಯಾಗಿರುವುದರಿಂದಾಗಿ 'ಜೋಡು' ಎನ್ನುವುದು ರೂಢಿ. ಅವೇ ಕಾವೀಧಾರಿಗಳ ಪಾದಗಳಲ್ಲಿದ್ದರೆ 'ಪಾದುಕೆ', ಆಡುಮಾತಿನಲ್ಲಿ 'ಹಾವುಗೆ' ಆದವು...' ಪ್ರೈಮರಿ ಸ್ಕೂಲ್ ಮಾಸ್ತರನಂತೆ ಮಾತಿಗಿಳಿದಿದ್ದೆ. ಮುಂದುವರಿದು, 'ಧಾರವಾಡ-ವಿಜಾಪೂರ ಕಡೆಗೆ, 'ಕೆರವು, ಕಾಲಿನವು, ಕಾಲ್ಮರಿ, ಛಡಾವು, ಚಮ್ಮಾವುಗೆ... ಒಂದೇ ಎರಡೇ' ಎಂದು ವಿವರಣೆಗೆ ತೊಡಗಿದಾಗ ಆ ಹುಡುಗಿಯರ ಮುಖದಲ್ಲಿ ಈಗ ನಮ್ಮ ಬಗೆಗೆ ತುಸು ವಿಶ್ವಾಸ ಕುದುರಿ, ಮಂದಹಾಸ ತುಳುಕಿತ್ತು. ಸಹಪ್ರಯಾಣಿಕರೂ ನಮ್ಮ ಮಾತು-ಕತೆಗೆ ತಲೆದೂಗುತ್ತಿದ್ದ ಹೊತ್ತಿಗೆ, ಅಷ್ಟರಲ್ಲಿ ಯಾವುದೋ ಸ್ಟೇಷನ್ ಬಂದು, ಆ ಹುಡುಗಿಯರು ಹಸನ್ಮುಖಿಯರಾಗೇ ಎದ್ದು,